19

ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01-02-2019ರ ಅನುಬಂಧ-10ರ ಕ್ರಮ ಸಂಖ್ಯೆ 02 ರಲ್ಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವ "Development of works to be undertaken around Solid Waste disposal/processing units to be established in future in Devanahalli, Hosakote, Nelmangala, Magadi and Ramanagara Taluks"ರ ಕಾಮಗಾರಿಗಳ ಬದಲಾಗಿ ಅದೇ ಮೊತ್ತದಲ್ಲಿ ಬ್ಯಾಟರಾಯನಪುರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ಹೊಸ ಬದಲಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01-02-2019.

2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್-108/2018-19, ದಿನಾಂಕ: 01-03-2019.

EE(P.C-5 & SWM)

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 01-02-2019ರ ಆದೇಶದಲ್ಲಿ 2018-19ನೇ ಸಾಲಿನಲ್ಲಿ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುವ ರೂ.2500 ಕೋಟಿಗಳ ಜೊತೆಯಲ್ಲಿ ರೂ.5517.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ. 8015.37 ಕೋಟಿಗಳ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಿದ್ದು, ಆದೇಶದ ಅನುಬಂಧ-10ರ ಕ್ರಮ ಸಂಖ್ಯೆ (2) ರಲ್ಲಿ "Development of works to be undertaken around Solid Waste disposal/processing units to be established in future in Devanahalli, Hosakote, Nelmangala, Magadi and Ramanagara Taluks"ರ ಕಾಮಗಾರಿಗಳಿಗೆ ರೂ.15000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 01-03-2019ರ ಪ್ರಸ್ತಾವನೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಬೆಂಗಳೂರಿನ ನಾಗರಿಕರಿಗೆ ಉತ್ತಮ ಜನಾರೋಗ್ಯವನ್ನು ಒದಗಿಸಲು ನಗರದ ಸ್ವಚ್ಚತೆಯನ್ನು ಕಾಪಾಡುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವುದು ಸಾರ್ವಜನಿಕರ ಆರೋಗ್ಯ ಮತ್ತು ಸ್ವಚ್ಚತೆಯನ್ನು ಕಾಪಾಡುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿರುತ್ತದೆ. ನಗರದಲ್ಲಿ ಪ್ರತಿದಿನ 4,000-4,200 ಮೆಟ್ರಿಕ್ ಟನ್‌ಗಳಷ್ಟು ಘನತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ. ಈ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಗ್ರಹಣೆ,

...2.

Scanned by TapScanner

ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿ ಮಾಡುವ ಕಾರ್ಯವನ್ನು ದೊಡ್ಡಪ್ರಮಾಣದಲ್ಲಿ ಸಮರ್ಪಕವಾಗಿ ನಿರ್ವಹಿಸುವುದು ಕಷ್ಟಕರವಾಗಿರುತ್ತದೆ. ಘನತ್ಯಾಜ್ಯ ವಿಲೇವಾರಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಮುಖ ಸಮಸ್ಯೆಯಾಗಿರುತ್ತದೆ. ಈಗಾಗಲೇ 7 ಘನತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗಿದ್ದರೂ ಸಂಸ್ಕರಣಾ ಘಟಕಗಳು ದಿನಕ್ಕೆ ಸುಮಾರು 1500 ಮೆ.ಟನ್ ತ್ಯಾಜ್ಯವನ್ನು ಮಾತ್ರ ಸ್ವೀಕರಿಸುವ ಕಾರಣ ಈ ಸಮಸ್ಯೆಯನ್ನು ಪರಿಹರಿಸಲಾಗಿಲ್ಲ ಈ ಮಿಶ್ರ ತ್ಯಾಜ್ಯವನ್ನು ಪ್ರತಿದಿನವು ಭೂಭರ್ತಿಯಲ್ಲಿನ ಸ್ಥಳಗಳಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ಪಾಲಿಕೆಯ ಕಡ್ಡಾಯ ಕರ್ತವ್ಯವಾಗಿರುತ್ತದೆ.

3. ಉಲ್ಲೇಖಿತ ಸರ್ಕಾರದ ಆದೇಶ (1), (2) ಮತ್ತು (3) ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ ಸರ್ವೇ ನಂ.176, 271 ಬಾಗಲೂರು, ಸರ್ವೇ ನಂ.67, ಮಿಟ್ಟಗಾನಹಳ್ಳಿ ಮತ್ತು ಸರ್ವೇ ನಂ.13 ಬೆಳ್ಳಹಳ್ಳಿ ಕ್ವಾರಿ ಪ್ರದೇಶಗಳಲ್ಲಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಭೂಭರ್ತಿ ಘಟಕವನ್ನು ಸ್ಥಾಪಿಸಲು ಅನುಮೋದನೆ ನೀಡಿದ್ದು, ಏಪ್ರಿಲ್-2016 ರಿಂದ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿರುವ ಬಾಗಲೂರು ಭೂಭರ್ತಿ ಘಟಕದಲ್ಲಿ NGT ತಡೆಯಾಜ್ಞೆಯಿಂದ ಆಗಸ್ಟ್-2017 ರಿಂದ ಹಾಗೂ ಸಾರ್ವಜನಿಕರ ಪ್ರತಿಭಟನೆಯಿಂದ ಭೂಭರ್ತಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ತದನಂತರ, ಬಾಗಲೂರು ಮತ್ತು ಮಿಟ್ಟಗಾನಹಳ್ಳಿ ಭೂಭರ್ತಿ ಘಟಕಕ್ಕೆ ವಿಲೇವಾರಿ ಮಾಡುತ್ತಿದ್ದ ಎಲ್ಲಾ ವಾಹನಗಳು ಸಹ ಬೆಳ್ಳಹಳ್ಳಿ ಸರ್ವೇ ನಂ.13 ರಲ್ಲಿ ವಿಲೇವಾರಿ ಮಾಡುತ್ತಿದ್ದು, ಪ್ರತಿದಿನ ಸುಮಾರು 275 ರಿಂದ 300 ಕಾಂಪ್ಯಾಕ್ಟರ್ ವಾಹನಗಳಿಂದ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ.

4. ದಿನಾಂಕ: 23-01-2019 ಮತ್ತು 24-01-2019 ರಂದು ಬೆಳ್ಳಹಳ್ಳಿ ಕ್ವಾರಿ ಸುತ್ತಮುತ್ತಲಿನ ಸ್ಥಳೀಯ ನಾಗರೀಕರು ಗ್ರಾಮದ ರಸ್ತೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಳ್ಳದಿರುವ ಬಗ್ಗೆ ಆಕ್ಷೇಪಣೆ ಸಲ್ಲಿಸಿ, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಅವಕಾಶ ನೀಡದೇ ಪ್ರತಿಭಟಿಸಿರುತ್ತಾರೆ. ಇದರಿಂದ ಪಾಲಿಕೆ ವ್ಯಾಪ್ತಿಯ ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ ತೊಂದರೆಯುಂಟಾಗಿದ್ದು, ಪ್ರತಿಭಟನೆ ಮುಂದುವರೆದ ಪಕ್ಷದಲ್ಲಿ ನಗರದಲ್ಲಿ ಕಸ ಶೇಖರಣೆಯಾಗುವ ಸಾಧ್ಯತೆಯಿರುತ್ತದೆ. ಈ ಬಗ್ಗೆ ದಿನಾಂಕ: 25-01-2019 ರಂದು ಪೂಜ್ಯ ಮಹಾಪೌರರು, ಪಾಲಿಕೆಯ ಆಯುಕ್ತರು, ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸ್ಥಳೀಯ ನಾಗರೀಕರೊಂದಿಗೆ ಸಭೆ ನಡೆಸಿ ಕ್ವಾರಿ ಸುತ್ತಮುತ್ತಲಿನ ಗ್ರಾಮಗಳ ರಸ್ತೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಹಿಂಪಡೆದಿರುತ್ತಾರೆ.

5. ಈ ಹಿನ್ನೆಲೆಯಲ್ಲಿ, ಪೂಜ್ಯ ಮಹಾಪೌರರು ದಿನಾಂಕ: 25-01-2019ರ ಪತ್ರದಲ್ಲಿ "ಬೆಳ್ಳಹಳ್ಳಿ ಗ್ರಾಮ ಮತ್ತು ಬೆಳ್ಳಹಳ್ಳಿ ಕ್ವಾರಿಯ ಸ್ಥಳೀಯ ನಾಗರೀಕರು ಗ್ರಾಮದ ರಸ್ತೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಳ್ಳದಿರುವ ಬಗ್ಗೆ ಆಕ್ಷೇಪಣೆ ಸಲ್ಲಿಸಿ, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಅವಕಾಶ ನೀಡದೇ ಪ್ರತಿಭಟಿಸಿರುತ್ತಾರೆ. ಇದರಿಂದ ಪಾಲಿಕೆ ವ್ಯಾಪ್ತಿಯ ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ ತೊಂದರೆಯುಂಟಾಗಿದ್ದು, ಪ್ರತಿಭಟನೆ ಮುಂದುವರೆದ ಪಕ್ಷದಲ್ಲಿ ನಗರದಲ್ಲಿ ಕಸ ಶೇಖರಣೆಯಾಗುವ ಸಾಧ್ಯತೆಯಿರುತ್ತದೆ ಎಂದು ತಿಳಿಸುತ್ತಾ, ಬೆಳ್ಳಹಳ್ಳಿ ಕ್ವಾರಿ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳ ನಿವಾಸಿಗಳು ತಮ್ಮ ಗ್ರಾಮದಲ್ಲಿ ವಿವಿಧ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ಸೌಲಭ್ಯ, ರಸ್ತೆಗಳ ಅಭಿವೃದ್ಧಿ, ಸೊಳ್ಳೆಗಳು ಮತ್ತು ಇತರೆ ಕ್ರಿಮಿಗಳ ನಿಯಂತ್ರಣ, ಕ್ವಾರಿ ಪ್ರದೇಶದಲ್ಲಿ ಘನತ್ಯಾಜ್ಯದ ಸಂಗ್ರಹಣೆಯಿಂದಾಗುವ ವಾಸನೆ ತಡೆಗಟ್ಟಲು, ಇತ್ಯಾದಿ ಸೌಕರ್ಯಗಳನ್ನು ಶೀಘ್ರವಾಗಿ ಕಲ್ಪಿಸಲು ಕೋರಿದ್ದು, ನಗರದ ಸಮರ್ಪಕ ಘನತ್ಯಾಜ್ಯ ನಿರ್ವಹಣೆ ಮತ್ತು ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ

...3.

Scanned by TapScanner

ಬೆಳ್ಳಹಳ್ಳಿ ಕ್ವಾರಿ ಪ್ರದೇಶದ ಕಾಮಗಾರಿಗಳ ಬಾಕಿ ಮೊತ್ತವನ್ನು ಕೂಡಲೇ ಬಿಡುಗಡೆಗೊಳಿಸಲು ಮತ್ತು ಹೊಸದಾಗಿ ನಾಗರೀಕರು ಕೋರಿರುವ ಮೂಲಭೂತ ಸೌಕರ್ಯ ವ್ಯವಸ್ಥೆ ಮತ್ತು ಭೂಭರ್ತಿ ಪ್ರದೇಶದಲ್ಲಿ ಉದ್ಯಾನವನ ಮತ್ತು ಮರಗಿಡಗಳನ್ನು ನೆಡುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆಯನ್ನು ಪಡೆಯಲು ಸೂಚಿಸಿರುವ ಮೇರೆಗೆ ಸ್ಥಳೀಯ ಸಚಿವರು ಮತ್ತು ಶಾಸಕರಾದ ಶ್ರೀ ಕೃಷ್ಣಭೈರೇಗೌಡ ರವರು ಹಾಗೂ ಶ್ರೀ ಮುನೀಂದ್ರ ಕುಮಾರ್, ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ: 5, ಜಕ್ಕೂರು ರವರು ತಿಳಿಸಿರುವ ಹಾಗೂ ಭೂಭರ್ತಿ ಘಟಕಗಳಲ್ಲಿ ಅವಶ್ಯವಿರುವ ಇತರೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ರೂ.135.00 ಕೋಟಿಗಳಿಗೆ ತಯಾರಿಸಲಾಗಿದ್ದು, ಸದರಿ ವೆಚ್ಚವನ್ನು ಸರ್ಕಾರದ ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧ-IIರ ಕ್ರಮ ಸಂಖ್ಯೆ: 14 ರಲ್ಲಿ ಅನುಮೋದನೆಗೊಂಡ ಯೋಜನೆ ಮೊತ್ತ ರೂ.135.00 ಕೋಟಿಗಳ ಕಾಮಗಾರಿಯನ್ನು ಕೈಬಿಡಲಾಗಿರುವ ಅನುದಾನದಿಂದ ಭರಿಸಬಹುದಾಗಿದ್ದು, ಸದರಿ ಮೊತ್ತ ರೂ.135.00 ಕೋಟಿಗಳ ಬದಲಿ ಕಾಮಗಾರಿಗಳಿಗೆ ಈ ಕೆಳಕಂಡಂತೆ ಕ್ರಿಯಾಯೋಜನೆಯನ್ನು ತಯಾರಿಸಿ ಸಲ್ಲಿಸಿದೆ.

ಕ್ರ. ಸಂ.	ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016ರ ಅನುಬಂಧ-IIರ ಕ್ರಮ ಸಂಖ್ಯೆ 14 ರಲ್ಲಿ ಅನುಮೋದನೆಯಾಗಿರುವ ಕಾಮಗಾರಿಯ ಹೆಸರು	ಮಂಜೂರಾತಿಯಾದ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)	ಈಗ ಹೊಸದಾಗಿ ಅನುಮೋದನೆ ನೀಡುವಂತೆ ಕೋರಿರುವ ಕಾಮಗಾರಿಗಳ ಹೆಸರು	ಈಗ ಹೊಸದಾಗಿ ಅನುಮೋದನೆ ನೀಡಬೇಕಾಗಿರುವ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1.	ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಉಕ್ಕಿನ ಮೇಲ್ಸೇತುವೆ ನಿರ್ಮಾಣ ಯೋಜನೆ	135.00	1. Improvements to roads and drains at Kattigenahalli, Babanagara, Muneshwara Badavane, Dwaraka nagara, Balaji Layout, Kalidasa Layout, Bhagathsingh Layout, Deence Layout, Kuvempu Nagara, Shivapura surrounding area in 05 Byatarayanapura Sub Division.	800.00
			2. Improvements to roads and drains at Palanahalli Thota, Kempegowda Badavane, Manjunatha Layout, Vinayaka nagara, Anand Nagara surrou nding area in 05 Byatarayana pura Sub-Division.	800.00
			3. Improvements to roads and drains at Chokkanahalli, Chokkanahalli Layout, Basava lingappa Nagara, Noor Naga ra, Agrahara Badavane, Lakshmi Layout, Chamundi Layout, Thirumenahalli surrounding area in 05 Byatarayanapura sub Division	800.00

...4.

Scanned by TapScanner

			4. Improvements to roads and drains at Kogilu, Kogilu Layout, Bellahalli, N.K.F. Layout, Krishnagarden, Prakruthi nagara, Krishna Nagara surroundding area in 05 Byatarayanapura sub Division	800.00
			5. Improvements to roads and drains at Poojamahalakshmi Layout, Kogilu Chamundi layout, Lakshmaiah Layout, Ayyappa Layout, Jayasurya Layout, Anjanadri Layout, Saptagiri Layout, Vidana soudha Layout surrounding area in 05 Byatarayanapura sub Division	700.00
			6. Improvements to roads and drains at MCECSH Layout 1st Phase and 2nd Phase, Venkate shwar Layout, Windfield Layout, Central Exchange Layout, Balaji Krupa Badavane surrounding area in 05 Byatarayanapura sub Division	800.00
			7. Construction of RO Plant and Drilling of Borewells installation of pump and motors, providing pipline and additional motor pumps and necessary accessories to existing borewells in Bellahalli, Kattigenahalli, Chokkanahalli, Thirumenahalli, Palanahalli, Agrahara, Sampigehalli, Srirampura, Jakkur, Kogilu Byatarayanapura Sub Division.	800.00
			8. Improvements of drains and asphalting to roads surrounding Saraipalya and Sadik Layout are in 06 Byatarayanapura sub Division.	350.00
			9. Asphalting to roads and construction of drains and culverts Bharath Nagara surrounding area in in 06 Byatarayanapura sub Division.	350.00
			10. Construction of drains and culverts and asphalting to road in Bhuvaneshwari Nagara 1st to 20th cross and 1st 'A' cross to 20th Cross in 06 Byatarayanapura sub Division.	350.00
			11. Asphalting to roads and improvements of drains in Dynastic Layout and Mariannapalya Church surroundings area in 06 Byatarayanapura sub Division.	300.00
			12. Asphalting to roads and construction culverts drains in Hegadenagara western side and MECHS layout surrounding in 06 Byatarayanapura sub Division.	400.00

...5..

Scanned by TapScanner

			10. Construction of drains and culverts and asphalting to road in Bhuvaneshwari Nagara 1st to 20th cross and 1st 'A' cross to 20th Cross in 06 Byatarayanapura sub Division.	350.00
			11. Asphalting to roads and improvements of drains in Dynastic Layout and Mariannapalya Church surroundings area in 06 Byatarayanapura sub Division.	300.00
			12. Asphalting to roads and construction culverts drains in Hegadenagara western side and MECHS layout surrounding in 06 Byatarayanapura sub Division.	400.00
			13. Asphalting to roads and construction culverts drains in Hegdenagara easter side and Ex Army Layout, Shabarinagara B/F Prashnathinagara, Cauvery Nagara, Siradi Sai Nagara surrounding area in 06 Byatarayanapura sub Division.	300.00
			14. Asphalting to roads and constructions culverts drains in Amarjyothi Nagara and Anjanadri Layout surrounding area in 06 Byatarayanapura sub Division.	350.00
			15. Asphalting to roads and improvements of drains and constructions culverts of drains and construction culverts in Thanisandra, Aswathnagara, Anam Enclave, Telecom Layout surrounding area in 06 Byatarayanapura sub Division.	350.00
			16. Asphalting to roads and construction of culverts and drains and cement concrete roads in Mestripalya and Rachenahalli surrounding area in 06 Byatarayanapura Sub Division.	400.00
			17. Drilling of borewells installation of pump and motors, providing pipeline and additional motor pumps and necessary accessories to existing borewells in 06 Byatarayanpura Sub Division.	450.00
			18. Improvements of Roads and Drains of Area opposite to Jakkur Govt. College in ward no. 07, Byatarayanapura.	60.00

. . . 6 .

				19. Improvements to drains of Venkategowda Layout Main Road from Ayyappa Swamy Temple to Raghavendra Hotel in ward no. 7, Byatarayanapura.	140.00
				20. Improvements to Roads and Drains of Amrutha Layout (Padma Tent Area) in ward no. 7, Byatarayanapura.	100.00
				21. Improvements to Roads and Drains of Amruthahalli and Sanjeevini nagara in ward no. 7, Byatarayanapura.	100.00
				22. Improvements to drains of Bhuvaneshwari nagar Park Road from Dasarahalli Main Road to Coffee Board Layout Park in ward no. 7, Byatarayanapura.	100.00
				23. Improvements to Road and Drains of Vinayaka Layout, 2nd Stage and Kuvempu Layout in ward no. 7, Byatarayanapura.	100.00
				24. Improvements to Drains of L&T Compound Road in ward no. 7, Byatarayanapura.	100.00
				25. Improvements to drains of Amruthahalli Main Road from Amruthahalli Circle to Sobha Windfall Apartment in ward no. 7, Byatarayanapura.	150.00
				26. Improvements to dains of Amruthahalli from Eshwar Temple to Gopal House in ward no. 7, Byatarayanapura.	150.00
				27.Comprehensive Development of ward no. 5, Jakkur	950.00
				28.Development and Establishment of Scientific Solid Waste Landfill at Sy. No. 13, Bellahalli Village, Bangalore North Taluk, Phase-IV	960.00
				29. Providing Liners and Filling the Red Gravelly Soil Layer by Layer as per the design and specification to avoid the perculation of rain water to underneath the scientifically landfilled at Bellahalli Quarry Site.	1020.00
				30. Maintenance of existing park at Mittaganahalli Sy. No. 02 and Bagalur Sy. No. 176.	100.00

...7.

Scanned by TapScanner

			31. Extinguishing the fire accident occurred at Bellahalli landfill site.	100.00
			32. Formation of approach road to solid waste disposal point at Sy. No. 13 of Bellahalli	270.00
			TOTAL	13500.00

6. ಸದರಿ ಮಾನರ್ಹ ವ್ಯಕ್ತಿಯಿಂದ ಹಡ್ಸನ್ ವ್ಯಕ್ತಿಯವರೆಗೆ ಉಳಿದ ಮೇಲ್ಸೇತುವೆ ನಿರ್ಮಾಣ ಯೋಜನೆಯನ್ನು ಕೈಬಿಡಲಾದ ಪ್ರಯುಕ್ತ ಉಳಿತಾಯಗೊಂಡ ಅನುದಾನ ರೂ.135.00 ಕೋಟಿಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದು, ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

7. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಯೈ 2018, ದಿನಾಂಕ: 01-02-2019ರ ಷರತ್ತುಗಳ ಕ್ರಮ ಸಂಖ್ಯೆ: 09 ರಲ್ಲಿ "ಕ್ರಿಯಾ ಯೋಜನೆಯಲ್ಲಿ ಅನುಷ್ಠಾನಗೊಳಿಸಬೇಕಿರುವ ಕಾಮಗಾರಿಗಳನ್ನು ಬದಲಾಯಿಸುವುದನ್ನು ಪ್ರತಿಬಂಧಿಸಿದೆ. ಪರ್ಯಾಯ ಕಾಮಗಾರಿಗಳನ್ನು ಅನಿವಾರ್ಯ ಕಾರಣಗಳಿಗಾಗಿ ಅನುಷ್ಠಾನಗೊಳಿಸಲೇಬೇಕಿದ್ದಲ್ಲಿ ಆಯುಕ್ತರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಮಾನ್ಯ ಇಲಾಖಾ ಸಚಿವರ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸುವ ವಿಕಲ್ಪ ಕಲ್ಪಿಸಿದೆ. ಅದರಂತೆ, ಆದೇಶದ ಅನುಬಂಧ-10ರ ಕ್ರಮ ಸಂಖ್ಯೆ: (2) ರಲ್ಲಿ "Development of works to be undertaken around Solid Waste disposal/ processing units to be established in future in Devanahalli, Hosakote, Nelmangala, Magadi and Ramanagara Taluks"ರ ಕಾಮಗಾರಿಗಳಿಗೆ ನಿಗಧಿಪಡಿರುವ ರೂ.15000.00 ಲಕ್ಷಗಳ ಅನುದಾನದ ಪೈಕಿ ರೂ.101.00 ಕೋಟಿಗಳ ವೆಚ್ಚದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ಹೊಸ ಬದಲಿ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡುವ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 172 ಎಂಎನ್‌ಯೈ 2019
ಬೆಂಗಳೂರು, ದಿನಾಂಕ: 04-05-2019.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಯೈ 2018, ದಿನಾಂಕ: 01-02-2019ರ ಅನುಬಂಧ-10ರ ಕ್ರಮ-ಸಂಖ್ಯೆ: (2) ರಲ್ಲಿ "Development of works to be undertaken around Solid Waste disposal/processing units to be established in future in Devanahalli, Hosakote, Nelmangala, Magadi and Ramanagara Taluks"ರ ಕಾಮಗಾರಿಗೆ ರೂ.15000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಉಲ್ಲೇಖಿತ (1)ರ ಆದೇಶದ ಅನುಬಂಧ-10ರ ಕ್ರಮ ಸಂಖ್ಯೆ: 02 ರಲ್ಲಿ ಮಂಜೂರಾಗಿರುವ ಅನುದಾನದ ಪೈಕಿ ರೂ.10100.00 ಲಕ್ಷಗಳು (ಹತ್ತುಸಾವಿರದ ನೂರು ಲಕ್ಷಗಳು ಮಾತ್ರ) ವೆಚ್ಚದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ಈ ಕೆಳಕಂಡ ಹೊಸ ಬದಲಿ ಕಾಮಗಾರಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

...8.

Scanned by TapScanner

ಸರ್ಕಾರದ ಆದೇಶ ಸಂಖ್ಯೆ: ಹಣ 375 ಎಂಂಸಿಸ್ಕೆ 2018, ದಿನಾಂಕ: 01-02-2019ರ ರ ಅನುಬಂಧ-10ರ ಕ್ರಮಸಂಖ್ಯೆ: (2) ರಲ್ಲಿ ಮಂಜೂರಾತಿಯಾದ ಕಾಮಗಾರಿಯ ಹೆಸರು	ಮಂಜೂರಾತಿಯಾದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕ್ರಮ ಸಂಖ್ಯೆ	ವಾರ್ಡ್ ಸಂಖ್ಯೆ	ಈಗ ಹೊಸದಾಗಿ ಅನುಮೋದನೆ ನೀಡಿರುವ ಕಾಮಗಾರಿಗಳ ಹೆಸರು	ಅಗ ಮಂಜೂರಾತಿಯಾದ ಮೊತ್ತ (ರೂ.ಲಕ್ಷಗಳಲ್ಲಿ)
Development of works to be undertaken around Solid Waste disposal/ processing units to be established in future in Devanahalli, Hosakote, Nelmangala, Magadi and Ramanagara Taluks"	15000.00	1	5	Improvements to roads and drains at Kattigenahalli, Babanagara, Muneshwara Badavane, Dwaraka nagara, Balaji Layout, Kalidasa Layout, Bhagathsingh Layout, Defence Layout, Kuvempu Nagara, Shivapura surrounding area in 05 Byatarayanapura Sub Division.	800.00
		2	5	Improvements to roads and drains at Palanahalli Thota, Kempegowda Badavane, Manjunatha Layout, Vinayaka nagara, Anand Nagara surrounding area in 05 Byatarayana pura Sub-Division.	800.00
		3	5	Improvements to roads and drains at Chokkanahalli, Chokkanahalli Layout, Basava lingappa Nagara, Noor Nagara, Agrahara Badavane, Lakshmi Layout, Chamundi Layout, Thirumenahalli surrounding area in 05 Byatarayanapura sub Division	800.00
		4	5	Improvements to roads and drains at Kogilu, Kogilu Layout, Bellahalli, N.K.F. Layout, Krishnagarden, Prakruthi nagara, Krishna Nagara surroundding area in 05 Byatarayanapura sub Division	800.00
		5	5	Improvements to roads and drains at Poojamahalakshmi Layout, Kogilu Chamundi layout, Lakshmaiah Layout, Ayyappa Layout, Jayasurya Layout, Anjanadri Layout, Saptagiri Layout, Vidana soudha Layout surrounding area in 05 Byatarayanapura sub Division	700.00
		6	5	Improvements to roads and drains at MCECSH Layout 1st Phase and 2nd Phase, Venkate shwar Layout, Windfield Layout, Central Exchange Layout, Balaji Krupa Badavane surrounding area in 05 Byatarayanapura sub Division	800.00
		7	5	Construction of RO Plant and Drilling of Borewells installation of pump and motors, providing pipline and additional motor pumps and necessary accessories to existing borewells in Bellahalli, Kattigenahalli, Chokkanahalli, Thirumenahalli, Palanahalli, Agrahara, Sampigehalli, Srirampura, Jakkur, Kogilu Byatarayanapura Sub Division.	800.00
				Sub Total	5500.00

Scanned by TapScanner

		1	6	Improvements of drains and asphalting to roads surrounding Saraipalya and Sadik Layout are in 06 Byatarayanapura sub Division.	350.00
		2	6	Asphalting to roads and construction of drains and culverts Bharath Nagara surrounding area in in 06 Byatarayanapura sub Division.	350.00
		3	6	Construction of drains and culverts and asphalting to road in Bhuvaneshwari Nagara 1st to 20th cross and 1st 'A' cross to 20th Cross in 06 Byatarayanapura sub Division.	350.00
		4	6	Asphalting to roads and improvements of drains in Dynastic Layout and Mariannapalya Church surroundings area in 06 Byatarayana pura sub Division.	300.00
		5	6	Asphalting to roads and construction culverts drains in Hegadenagara western side and MECHS layout surrounding in 06 Byatarayanapura sub Division.	400.00
		6	6	Asphalting to roads and construction culverts drains in Hegdenagara easter side and Ex Army Layout, Shabarinagara B/F Prashnathinagara, Cauvery Nagara, Siradi Sai Nagara surrounding area in 06 Byatarayana pura sub Division.	300.00
		7	6	Asphalting to roads and constructions culverts drains in Amarjyothi Nagara and Anjanadri Layout surrounding area in 06 Byatarayanapura sub Division.	350.00
		8	6	Asphalting to roads and improvements of drains and constructions culverts of drains and construction culverts in Thanisandra, Aswathnagara, Anam Enclave, Telecom Layout surrounding area in 06 Byatarayana pura sub Division.	350.00
		9	6	Asphalting to roads and construction of culverts and drains and cement concrete roads in Mestripalya and Rachenahalli surrounding area in 06 Byatarayanapura Sub Division.	400.00
		10	6	Drilling of borewells installation of pump and motors, providing pipeline and additional motor pumps and necessary accessories to existing borewells in 06 Byatarayanpura Sub Division.	450.00
				Sub Total	**3600.00**
		1	7	Improvements of Roads and Drains of Area opposite to Jakkur Govt. College in ward no. 07, Byatarayanapura.	60.00

Scanned by TapScanner

		2	7	Improvements to drains of Venkategowda Layout Main Road from Ayyappa Swamy Temple to Raghavendra Hotel in ward no. 7, Byatarayanapura.	140.00
		3	7	Improvements to Roads and Drains of Amrutha Layout (Padma Tent Area) in ward no. 7, Byatarayanapura.	100.00
		4	7	Improvements to Roads and Drains of Amruthahalli and Sanjeevini nagara in ward no. 7, Byatarayanapura.	100.00
		5	7	Improvements to drains of Bhuvaneshwari nagar Park Road from Dasarahalli Main Road to Coffee Board Layout Park in ward no. 7, Byatarayanapura.	100.00
		6	7	Improvements to Road and Drains of Vinayaka Layout, 2nd Stage and Kuvempu Layout in ward no. 7, Byatarayanapura.	100.00
		7	7	Improvements to Drains of L&T Compound Road in ward no. 7, Byatarayanapura.	100.00
		8	7	Improvements to drains of Amruthahalli Main Road from Amruthahalli Circle to Sobha Windfall Apartment in ward no. 7, Byatarayanapura.	150.00
		9	7	Improvements to dains of Amruthahalli from Eshwar Temple to Gopal House in ward no. 7, Byatarayanapura.	150.00
				Sub Total	1000.00
				Grand TOTAL	10100.00

ಷರತ್ತುಗಳು:

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಕ್ರಿಯಾ ಯೋಜನೆಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ, ಆದ್ದರಿಂದ, ಅನುಮೋದನೆಗೊಂಡ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಸಿದ್ಧಪಡಿಸಿ, ನಿಯಮಾನುಸಾರ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು, ಪ್ಯಾಕೇಜ್‌ವಾರು ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

2. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಇತರೆ ಯಾವುದೇ ಯೋಜನೆಯಡಿಯಲ್ಲಿ ಪುನಾರಾವರ್ತನೆ ಆಗಿರುವುದಿಲ್ಲ ಎಂಬುದನ್ನು ಆಯುಕ್ತರು ಬಿ.ಬಿ.ಎಂ.ಪಿ. ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

3. ಅನುಮೋದಿತ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಬಿ.ಬಿ.ಎಂ.ಪಿ. ಮತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

...11.

Scanned by TapScanner

4. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾದಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

5. ಅನುಮೋದನೆ ನೀಡಲಾದ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

6. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪ್ಯೆ 2018, ದಿನಾಂಕ: 01-02-2019ರ ರಲ್ಲಿನ ಎಲ್ಲಾ ಷರತ್ತುಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಕಂಪೆಂಡಿಯಂ/ಇಲಾಖಾ ವೆಬ್‌ಸೈಟ್.

Scanned by TapScanner

ಕರ್ನಾಟಕ ಸರ್ಕಾರದ ನಡವಳಿ

(8)

ವಿಷಯ: 2018–19ನೇ ಸಾಲಿನಲ್ಲಿ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2018–19, 2019–20 ಮತ್ತು 2020–21ರ ಆರ್ಥಿಕ ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/4425/2018–19, ದಿನಾಂಕ: 27–08–2018, 22–10–2018 ಮತ್ತು 05–12–2018.
2. ಸರ್ಕಾರದ ಆದೇಶ ಸಂಖ್ಯೆ ನಅಇ 47 ಎಸ್‌ಎಫ್‌ಸಿ 2016 ದಿನಾಂಕ 14–06–2016 ಮತ್ತು 03–11–2016

* * * * *

ಪ್ರಸ್ತಾವನೆ:

2018–19ನೇ ಸಾಲಿನ ಆಯವ್ಯಯದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಕೆಳಕಂಡ ಕಾರ್ಯಕ್ರಮಗಳಿಗಾಗಿ ರೂ.2500.00 ಕೋಟಿಗಳನ್ನು ಘೋಷಿಸಲಾಗಿರುತ್ತದೆ.

ಕ್ರ ಸಂ.	ಆಯವ್ಯಯದ ಘೋಷಣೆ ವಿವರ
1	ಮುಂದಿನ ಐದು ವರ್ಷಗಳಲ್ಲಿ ನಗರದ ಎಲ್ಲಾ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲು ಉದ್ದೇಶಿಸಿದ್ದು, 2018–19ನೇ ಸಾಲಿನಲ್ಲಿ 150 ಕಿ.ಮೀ. ಉದ್ದದ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೊಳ್ಳಲಾಗುವುದು.
2	ಪಾಲಿಕೆ ವತಿಯಿಂದ ಒಟ್ಟು 88 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು ಪ್ರಾರಂಭಿಕವಾಗಿ 40 ಕೆರೆಗಳ ಅಭಿವೃದ್ಧಿ ಕೈಗೊಳ್ಳಲಾಗುವುದು.
3	ಪಾಲಿಕೆ ವ್ಯಾಪ್ತಿಯ 100 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳ ಸಮಗ್ರ ಅಭಿವೃದ್ಧಿ.
4	ನಗರದ ವಾಹನ ದಟ್ಟಣೆ ಕಡಿಮೆಗೊಳಿಸಲು ಪ್ರಮುಖ ಎಂಟು ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ.
5	150 ಕಿ.ಮೀ. ಬೃಹತ್ ನೀರುಗಾಲುವೆ ಅಭಿವೃದ್ಧಿ.
6	ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ 250 ಕಿ.ಮೀ. ಉದ್ದದ ವಿವಿಧ ರಸ್ತೆಗಳ ಪಾದಚಾರಿ ಮಾರ್ಗಗಳ ಅಭಿವೃದ್ಧಿ.
7	ಪಾಲಿಕೆ ವ್ಯಾಪ್ತಿಗೆ ಸೇರ್ಪಡೆ ಮಾಡಿರುವ 110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿ.
8	ವೈಟ್‌ಫೀಲ್ಡ್ ಪ್ರದೇಶದಲ್ಲಿ ಮೆಟ್ರೋ ಕಾಮಗಾರಿಯಿಂದ ಆಗುತ್ತಿರುವ ತೀವ್ರ ವಾಹನದಟ್ಟಣೆ ಸಮಸ್ಯೆಯನ್ನು ನಿವಾರಿಸಲು ಐ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿ.

. . . 2 .

ಶ್ರೀ ಎ. ಸಿದ್ದರಾಮಪ್ಪ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

Scanned by TapScanner

9	ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಕಾಮಗಾರಿಗೆ ಸಂಬಂಧಪಟ್ಟಂತೆ ಒಡಂಬಡಿಕೆಯ ಪ್ರಕಾರ ಹೆಚ್.ಎ.ಎಲ್ ಸಂಸ್ಥೆಯವರು ನೀಡಿರುವ ಸ್ಥಿತಿಗೆ ಬದಲಾಗಿ ಎಸ್.ಎ.ಎಲ್-ಟಿಂಡ್ ಟನಲ್ ರಸ್ತೆ ನಿರ್ಮಾಣ.

ಮೇಲೆ (1) ರಲ್ಲಿ ಓದಲಾದ ದಿನಾಂಕ: ದಿನಾಂಕ: 27-08-2018, 22-10-2018 ಮತ್ತು 05-12-2018 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು 2018-19ನೇ ಸಾಲಿನಲ್ಲಿ ಆಯವ್ಯಯದಲ್ಲಿ ಘೋಷಿಸಿರುವ ಒಟ್ಟು ರೂ.2500.00 ಕೋಟಿಗಳ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮೂರ್ಮಾಪನ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಅದರಂತೆ, ರೂ.2500 ಕೋಟಿಗಳ ಹೊತೆಯಲ್ಲಿ ರೂ.5515.23 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ.8015.23 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳುವ ಕ್ರಿಯಾ ಯೋಜನೆಗೆ ಅನುಮೋದನೆಗಾಗಿ ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದು, ಈ ಕಾಮಗಾರಿಗಳು 2018-19ನೇ ಸಾಲಿನಲ್ಲಿ ಪ್ರಾರಂಭಗೊಳ್ಳಲಿದೆ.

ಕ್ರ ಸಂ.	ವಿವರ	ಅಂದಾಜು ಮೊತ್ತ (ರೂ.ಕೋಟಿ)	2018-19ಕ್ಕೆ ಬೇಕಾಗುವ ಮೊತ್ತ (ರೂ.ಕೋಟಿ)	2019-20ಕ್ಕೆ ಬೇಕಾಗುವ ಮೊತ್ತ (ರೂ.ಕೋಟಿ)	2020-21ಕ್ಕೆ ಬೇಕಾಗುವ ಮೊತ್ತ (ರೂ.ಕೋಟಿ)
1	ವೈಟ್ ಟಾಪಿಂಗ್	1306.00	250.00	500.00	556.00
2	ಕೆರೆಗಳ ಅಭಿವೃದ್ಧಿ	348.00	250.00	98.00	0.00
3	ರಸ್ತೆಗಳ ಅಭಿವೃದ್ಧಿ	2331.78	700.00	1631.78	0.00
4	ಗ್ರೇಡ್ ಸೆಪರೇಟರ್ ನಿರ್ಮಾಣ	629.00	140.00	300.00	189.00
5	ಬೃಹತ್ ನೀರುಗಾಲುವೆ ಅಭಿವೃದ್ಧಿ	1434.15	400.00	600.00	434.15
6	ಪಾದಚಾರಿ ಮಾರ್ಗಗಳ ಅಭಿವೃದ್ಧಿ	75.00	50.00	25.00	0.00
7	110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿ	275.00	180.00	95.00	0.00
8	ಬಿ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿ.	80.00	20.00	60.00	0.00
9	ಎಸ್.ಎ.ಎಲ್-ಟಿಂಡ್ ಟನಲ್ ರಸ್ತೆ ನಿರ್ಮಾಣ.	65.00	30.00	35.00	0.00
ಉಪ ಮೊತ್ತ		6543.93	2020.00	3344.78	1179.15
10	ಘನ ತ್ಯಾಜ್ಯ ನಿರ್ವಹಣೆ	643.00	200.00	443.00	0.00
11	ಕಟ್ಟಡಗಳು ಮತ್ತು ಆಸ್ತಿಪ್ರಗಳು	431.30	55.00	376.30	0.00
12	ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಾದ ಜಮೀನಿನಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳು	102.00	50.00	52.00	0.00
13	ಯೋಜನೆಗಳ ಭೂಸ್ವಾಧೀನ ವೆಚ್ಚ	100.00	100.00	0.00	0.00
14	ಬಿಡಿಎ ಯಿಂದ ಪಡೆಯಂತೆ ವರ್ಗಾವಣೆಗೊಂಡಿರುವ ಯೋಜನೆಗಳು	195.00	75.00	70.00	50.00
	ಉಪ ಮೊತ್ತ	1471.30	480.00	941.30	50.00
	ಒಟ್ಟು ಮೊತ್ತ	8015.23	2500.00	4286.08	1229.15

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎಸ್‌ಪಿ 2018
ಬೆಂಗಳೂರು, ದಿನಾಂಕ: 01-02-2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನಲ್ಲಿ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುವ ರೂ.2500 ಕೋಟಿಗಳ ಜೊತೆಯಲ್ಲಿ ರೂ.5515.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ.8015.37 ಕೋಟಿಗಳ ಮೊತ್ತದ ಅಡಿಯಲ್ಲಿ ಕೈಗೊಳ್ಳುವ ಈ ಕೆಳಕಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಳಗೆ ಪಟ್ಟಿಮಾಡಿದ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

ಅನುಬಂಧ ಸಂಖ್ಯೆ	ವಿವರ	ಅಂದಾಜು ಮೊತ್ತ (ರೂ.ಕೋಟಿ)	2018-19ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2019-20ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2020-21ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)
1	ವೈಟ್ ಟಾಪಿಂಗ್	1172.00	250.00	500.00	422.00
2	ಕೆರೆಗಳ ಅಭಿವೃದ್ಧಿ	348.00	250.00	98.00	0.00
3	ರಸ್ತೆಗಳ ಅಭಿವೃದ್ಧಿ	2246.68	700.00	1546.68	0.00
4	ಗ್ರೇಡ್ ಸಪರೇಟರ್ ನಿರ್ಮಾಣ	534.60	140.00	300.00	94.60
5	ಬೃಹತ್ ನೀರುಗಾಲುವೆ ಅಭಿವೃದ್ಧಿ	1321.14	400.00	600.00	321.14
6	ಪಾದಚಾರಿ ಮಾರ್ಗಗಳ ಅಭಿವೃದ್ಧಿ	75.00	50.00	25.00	0.00
7	110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿ	275.00	180.00	95.00	0.00
8	ಐ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿ.	80.00	20.00	60.00	0.00
9	ಎನ್.ಎ.ಎಲ್-ವಿಂಡ್ ಟನಲ್ ರಸ್ತೆ ನಿರ್ಮಾಣ.	65.00	30.00	35.00	0.00
	ಮೊತ್ತ	**6117.42**	**2020.00**	**3259.68**	**837.74**
10	ಘನ ತ್ಯಾಜ್ಯ ನಿರ್ವಹಣೆ	753.00	200.00	443.00	110.00
11	ಕಟ್ಟಡಗಳು ಮತ್ತು ಆಸ್ಪತ್ರೆಗಳು	247.95	55.00	192.95	0.00
12	ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಿರುವ ಜಮೀನಿನಲ್ಲಿ ಅನುಷ್ಠಾನಗೊಳಿಸಬೇಕಿರುವ ಯೋಜನೆಗಳು	102.00	50.00	52.00	0.00

. . . 4 .

Scanned by TapScanner

13	ಯೋಜನೆಗಳ ಭೂಸ್ವಾಧೀನ ವೆಚ್ಚ	100.00	100.00	0.00	0.00
14	ಬಿಡಿಎ ಯಿಂದ ಬಿಬಿಎಂಪಿಗೆ ವರ್ಗಾವಣೆ ಗೊಂಡಿರುವ ಯೋಜನೆಗಳು	195.00	75.00	70.00	50.00
	ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಒಳಪಟ್ಟು ಕಾಯ್ದಿಟ್ಟ ಅನುದಾನ	300.00	0.00	150.00	150.00
	ಮಾನ್ಯ ಉಪ ಮುಖ್ಯಮಂತ್ರಿಗಳ ವಿವೇಚನೆಗೆ ಒಳಪಟ್ಟು ಕಾಯ್ದಿಟ್ಟ ಅನುದಾನ	200.00	0.00	100.00	100.00
	ಮೊತ್ತ	**1897.95**	**480.00**	**1007.95**	**410.00**
	ಒಟ್ಟಾರೆ ಮೊತ್ತ	**8015.37**	**2500.00**	**4267.63**	**1247.74**

ಷರತ್ತುಗಳು:

1. 2018-19ನೇ ಸಾಲಿನ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ವಿವಿಧ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ "ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ 4217-01-800-0-02" ರಲ್ಲಿ ಅನುಷ್ಠಾನಕ್ಕೆ ಅವಕಾಶ ಕಲ್ಪಿಸಿದೆ.

2. ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಿರುವ ಈ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000ರಂತೆ ಹಾಗೂ e-procurement portal ಮುಖಾಂತರ ಪ್ಯಾಕೇಜ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು 2 ಹಂತದಲ್ಲಿ ಟೆಂಡರ್ ಕರೆದು ಕೈಗೊಂಡು, ಆಡಳಿತಾತ್ಮಕ ಅನುಮೋದನೆಯನ್ನು ಮತ್ತು ಟೆಂಡರ್‌ಗಳಿಗೆ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅನುಷ್ಠಾನಗೊಳಿಸುವುದು.

3. ಈ ಕ್ರಿಯಾಯೋಜನೆಯಲ್ಲಿ ರೂ.50 ಕೋಟಿಗಳಿಗಿಂತ ಹೆಚ್ಚಿನ ಮೌಲ್ಯದ ಎಲ್ಲ ಕಾಮಗಾರಿಗಳು ಮತ್ತು ಪ್ಯಾಕೇಜುಗಳ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅನುಮೋದನೆಗಾಗಿ ಅಧಿಕಾರಯುಕ್ತ ಸಮಿತಿಯ ಮೂಲಕ ಸಚಿವಸಂಪುಟದ ಮುಂದೆ ಮಂಡಿಸತಕ್ಕದ್ದು.

4. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ದಿನಾಂಕ: 14-06-2016 ಮತ್ತು 03-11-2016ರಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

5. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ/ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಆಯುಕ್ತರು, ಬಿ.ಬಿ.ಎಂ.ಪಿ. ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಂಡು ಟೆಂಡರ್ ಕರೆಯತಕ್ಕದ್ದು.

6. ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ಹೊಸ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸತಕ್ಕದ್ದಲ್ಲ.

7. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಆಯುಕ್ತರ ಜವಾಬ್ದಾರಿಯಾಗಿರುತ್ತದೆ.

. . . 5 .

ಅಯುಕ್ತರು
ಕಾರ್ಯದ

Scanned by TapScanner

8. ಅನುದಾನಕ್ಕೆ ಸೂಕ್ತ ಯೋಜನೆಗಳನ್ನು ಗುರುತಿಸಿ ಅನುಮೋದಿಸುವ ಮತ್ತು ಅನುದಾನ ಬಳಸಿಕೊಳ್ಳುವ ಸಚಿವಸಂಪುಟದ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳ ವಿವೇಚನೆಗೆ ಕಾಯ್ದಿಟ್ಟು ಅನುದಾನಕ್ಕೆ ಸಮಿತಿಯಾಗಿ ಆಯಾ ಅನುದಾನಕ್ಕೆ ಕ್ಕಂತೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಪ್ರತ್ಯಾಯೋಜಿಸಲಾಗಿದೆ.

9. ಕ್ರಿಯಾಯೋಜನೆಯಲ್ಲಿ ಅನುಷ್ಠಾನಗೊಳಿಸಬೇಕಿರುವ ಕಾಮಗಾರಿಗಳನ್ನು ಬದಲಾಯಿಸುವುದನ್ನು ಪ್ರತಿಬಂಧಿಸಿದೆ. ಪರ್ಯಾಯ ಕಾಮಗಾರಿಗಳನ್ನು ಅನಿವಾರ್ಯ ಕಾರಣಗಳಿಗಾಗಿ ಅನುಷ್ಠಾನಗೊಳಿಸಲೇಬೇಕಿದ್ದಲ್ಲಿ ಆಯುಕ್ತರ ಸ್ಪಷ್ಟ ಶಿಫಾರಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಮಾನ್ಯ ಇಲಾಖಾ ಸಚಿವರ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸುವ ಏರ್ಪಾಡು ಕಲ್ಪಿಸಿದೆ.

10. ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಇತ್ತೀಚಿನ ತೀರ್ಮಾ ಮತ್ತು ಆದೇಶಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಆಯುಕ್ತರ ಜವಾಬ್ದಾರಿಯಾಗಿರುತ್ತದೆ.

11. ಪ್ರಸ್ತುತ ಅನುಷ್ಠಾನಗೊಳ್ಳುತ್ತಿದ್ದು ಈ ಕ್ರಿಯಾಯೋಜನೆಯಲ್ಲಿ ಹೆಚ್ಚುವರಿ ಅನುದಾನ ಒದಗಿಸಲಾಗಿರುವ ಯೋಜನೆಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಿ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಿ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರವಷ್ಟೆ ಅನುಷ್ಠಾನಗೊಳಿಸತಕ್ಕದ್ದು.

12. ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ದಿನಾಂಕ: 14-06-2016 ಮತ್ತು 03-11-2016ರಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯು ಈ ಆದೇಶದಲ್ಲಿ ಅನುಮೋದಿಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಆಗಿಂದ್ದಾಗೆ ನಡೆಸತಕ್ಕದ್ದು.

13. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿ.ಬಿ.ಎಂ.ಪಿ.ಯ ಪ್ರಧಾನ ಅಭಿಯಂತರರು, ಹಾಗೂ ಮುಖ್ಯ ಅಭಿಯಂತರರು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟು ನಿಟ್ಟಿನ ಕ್ರಮವಹಿಸತಕ್ಕದ್ದು.

14. ಆಯುಕ್ತರು, ಬಿ.ಬಿ.ಎಂ.ಪಿ. ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

15. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಆಯುಕ್ತರು, ಬಿ.ಬಿ.ಎಂ.ಪಿ. ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

16. ಈ ಕ್ರಿಯಾಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಸ್ತುತ ಅನುಷ್ಠಾನಗೊಳಿಸುತ್ತಿದ್ದಲ್ಲಿ ಅಂತಹ ಯೋಜನೆಗಳಿಗೆ ನಿಗದಿಯಾಗಿರುವ ಅನುದಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎರಡು ಹಂತಗಳಲ್ಲಿ 2019-20 ಮತ್ತು 2020-21ರ ಆರ್ಥಿಕ ವರ್ಷಗಳಲ್ಲಿ ಬಿಡುಗಡೆಗೊಳಿಸುವುದು.

ಈ ಆದೇಶವನ್ನು ದಿನಾಂಕ: 28-01-2019 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿಸ 45/2019 ರಲ್ಲಿ ಕೈಗೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎ.ದಯಾನಂದ)
ಸರ್ಕಾರದ ಉಪ ಕಾರ್ಯದರ್ಶಿ-3,
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಲೆಕ್ಕ ಪರಿಶೋಧನೆ/ಲೆಕ್ಕಪತ್ರ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

...6.

Scanned by TapScanner

4. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ: 45/2019, ದಿನಾಂಕ: 28-01-2019)
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
8. ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಕಂಪ್ಯೂಡಿಯಂ/ಇಲಾಖಾ ವೆಬ್‌ಸೈಟ್.

ಹೆಚ್.ಎ. ಪಿದಾಯುತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

Scanned by TapScanner